## 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

ಎಸ್‌ಸಿ. 245/2023

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಶ್ರೀ ನಾಗೇಶ | | ಪ್ರಮಾಣ ಮಾಡಿಸಿದ ದಿನಾಂಕಃ |
| ತಂದೆ/ಗಂಡನ ಹೆಸರು | ಃ ಶ್ರೀ ದೊಡ್ಡಸ್ವಾಮಿಗೌಡ | | 23.01.2025 |
| ವಯಸ್ಸು | ಃ 60 ವರ್ಷ | | |
| ವೃತ್ತಿ | ಃ ವ್ಯವಸಾಯ | ಪ್ರಾ.ಸಾ. | ಃ 10 |
| ವಾಸಸ್ಥಳ | ಃ ಕುಂಬಾರಕೊಪ್ಪಲು | ಚಾ.ಸಾ. | ಃ 09 |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ಚಾ.ಸಾ-1 ಚಂದನ್ ನನ್ನ ಮಗನಿರುತ್ತಾನೆ. ದಿಃ14.03.2023 ರಂದು ರಾತ್ರಿ 8.45 ಕ್ಕೆ ನಾನು, ನನ್ನ ಹೆಂಡತಿ, ಮಕ್ಕಳು ಮತ್ತು ಸೊಸೆ ಮನೆಯಲ್ಲಿದ್ದೆವು. ಆ ಕಾಲಕ್ಕೆ ಮನೆಯ ಹೊರಗಡೆಯಿಂದ ಚಂದನ್ ಚಂದನ್ ಎಂದು ಕೂಗಿದ್ದ ಆಗ ನನ್ನ ಮಗ ಚಂದನ್ ಮನೆಯಿಂದ ಹೊರಗಡೆ ಹೋಗಿದ್ದ. ನಂತರ ಸ್ವಲ್ಪ ಹೊತ್ತಿಗೆ ನನ್ನ ಮಗ ಅಪ್ಪ ಅಪ್ಪ ಚುಚ್ಚಿ ಬಿಟ್ಟ ಎಂದು ಹೇಳಿದ್ದ ಆಗ ನಾನು ಮನೆಯ ಹೊರಗಡೆ ಹೋಗಿದ್ದೆ. ಆ ಕಾಲಕ್ಕೆ ಆರೋಪಿತ ಇವತ್ತೇನೋ ಉಳಿದುಕೊಂಡೇ ಇನ್ನೊಮ್ಮೆ ನಿನ್ನನ್ನು ಕೊಲೆ ಮಾಡುತ್ತೇನೆ ಎಂದು ಹೇಳಿ ಓಡಿಹೋಗಿದ್ದ. ನಾನು ಮತ್ತು ನನ್ನ ಮಗ ಆರೋಪಿತನನ್ನು ಹಿಡಿಯಲು ಓಡಿ ಹೋಗಿದ್ದೆವು ಆಗ ಅವನು ಓಡಿ ಹೋಗಿದ್ದ. ರಾಮ ಮಂದಿರದವರೆಗೆ ಓಡಿ ಹೋಗಿ ನಂತರ ಸುಸ್ತಾಗಿ ನಿಂತುಕೊಂಡಿದ್ದೆವು. ಆರೋಪಿತ ನರಸಿಂಹ ಎನ್ನುವವರು ಕಟ್ಟುತಿದ್ದ ಮನೆ ಬಳಿ ಮುಗ್ಗರಿಸಿ ಬಿದ್ದು ನಂತರ ಎದ್ದು ಓಡಿ ಹೋಗಿದ್ದ. ಆ

ಕಾಲಕ್ಕೆ ನನ್ನ ಮಗನನ್ನು ವಿಚಾರಿಸಿದಾಗ ಆತನಿಗೆ ಎಡ ಭುಜ ಮತ್ತು ಬೆನ್ನಿನ ಬಳಿ ಚುಚ್ಚಿದ ಗಾಯವಾಗಿತ್ತು. ಅದರಿಂದ ರಕ್ತ ಬರುತ್ತಿತ್ತು ಮತ್ತು ಬಟ್ಟೆಗೆ ರಕ್ತ ಹತ್ತಿತ್ತು. ಆ ಕಾಲಕ್ಕೆ ನನ್ನ ಮಗನನ್ನು ವಿಚಾರಿಸಿದಾಗ ಆರೋಪಿತ ವಿನಯ್ ಎನ್ನುವವನಿಗೆ ಚುಚ್ಚಿದ್ದು ಅದಕ್ಕೆ ತಾನು ಸಾಕ್ಷಿ ಹಾಕಿದ್ದು ನೀನು ಏಕೆ ಸಾಕ್ಷಿ ಹೇಳುತ್ತೀಯಾ ಸಾಕ್ಷಿ ವಾಪಸ್ಸು ತೆಗೆದಿಕೋ ಅವನಿಗೂ ಕೇಸ್ ವಾಪಸ್ಸು ತೆಗೆದುಕೊಳ್ಳಲು ಹೇಳು ಎಂದು ತನ್ನ ಮೇಲೆ ಹಲ್ಲೆ ಮಾಡಿದ್ದಾಗಿ ಹೇಳಿದ್ದ. ನಂತರ ನನ್ನ ಮಗನನ್ನು ನನ್ನ ಇನ್ನೊಬ್ಬ ಮಗ ಮತ್ತು ಆತನ ಗೆಳೆಯ ಕೆ.ಆರ್.ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ಆಸ್ಪತ್ರೆಗೆ ಹೋಗಿದ್ದರಿಂದ ನನ್ನ ಮಗ ನಂತರ ದಿಃ*16.03.2023* ರಂದು ದೂರು ಕೊಟ್ಟಿದ್ದ. ಈ ಬಗ್ಗೆ ನನ್ನನ್ನು ವಿಚಾರಣೆ ಮಾಡಿದ್ದಾರೆ. ಆ ದಿನ ನಾನು ಡ್ರ್ಯಾಗರ್ ಅನ್ನು ನೋಡಿಲ್ಲ ಆದ್ದರಿಂದ ಗುರುತಿಸಲು ಆಗುವುದಿಲ್ಲ. ಕೋರ್ಟ್ ಮುಂದೆ ಇರುವ ಆರೋಪಿತನೇ ಆ ದಿನ ನನ್ನ ಮಗನಿಗೆ ಹಲ್ಲೆ ಮಾಡಿ ಓಡಿ ಹೋಗಿದ್ದ ವ್ಯಕ್ತಿಯಿರುತ್ತಾನೆ. ಆ ದಿನ ಆರೋಪಿ ಧರಿಸಿದ್ದ ಬಟ್ಟೆಗಳನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ. ಈಗ ನನಗೆ ಮರೆತು ಹೋಗಿರುವುದರಿಂದ ನನಗೆ ಗುರುತಿಸಲು ಆಗುವುದಿಲ್ಲ.

*ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.*

*ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-*

*2.* ಆ ದಿನ ಆರೋಪಿತ ಹಸಿರು ಬಣ್ಣದ ಟಿ.ಶರ್ಟ್, ಜೀನ್ಸ್ ಪ್ಯಾಂಟ್, ತಲೆಗೆ ಟೋಪಿ ಮತ್ತು ಮಾಸ್ಕ್ ಧರಿಸಿದ್ದ ಎಂದರೆ ಈಗ ನೆನಪಿಲ್ಲ. ಆ ದಿನ ನಾನು ಮನೆಯಿಂದ ಹೊರಗಡೆ ಬಂದಾಗ ಆರೋಪಿತ ನನ್ನ ಮಗನನ್ನು ಕುರಿತು ಇವತುತ ನನ್ನಿಂದ ಕೊಲೆಯಾಗುವುದನ್ನು

ತಪ್ಪಿಸಿಕೊಂಡೇ ಇನ್ನೊಂದು ದಿನ ನಿನ್ನನ್ನು ಕೊಲೆ ಮಾಡಿಯೇ ಮಾಡುತ್ತೇನೆ ಎಂದು ಡ್ರ್ಯಾಗರ್ ತೋರಿಸುತ್ತಾ ಗಲ್ಲಿಯಲ್ಲಿ ಓಡುತ್ತಿದ್ದಾಗ ನಾನು ಮತ್ತು ನನ್ನ ಮಗ ಹಿಡಿಯಿರಿ ಎಂದು ಅವನನ್ನು ಹಿಂಭಾಲಿಸಿದ್ದೆವು ಎಂದರೆ ಆ ರೀತಿ ನನ್ನ ಮುಂದೆ ಹೇಳಿಲ್ಲ ನನ್ನ ಮಗನ ಮುಂದೆ ಹೇಳಿದ್ದಾನೆ. ಈ ಬಗ್ಗೆ ನಾನು ತಕ್ಷಣ -------- ಓಡುತ್ತಿದ್ದಾಗ ಎಂದು ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ-*12* ಎಂದು ಗುರುತಿಸಿದೆ. ಈಗ ನಾನು ನೋಡುತ್ತಿರುವ ಎಂ.ಒ-*2* ಡ್ರ್ಯಾಗರ್ ನಿಂದಲೇ ಆ ದಿನ ಆರೋಪಿತ ನನ್ನ ಮಗನಿಗೆ ಹಲ್ಲೆ ಮಾಡಿದ್ದ ಎಂದರೆ ನಾನು ನೋಡಿಲ್ಲ. ಈಗ ನಾನು ನೋಡುತ್ತಿರುವ ಎಂ.ಒ-*3* ರಿಂದ *5* ಎಂದು ಗುರುತಿಸಿರುವ ಬಟ್ಟೆಗಳೇ ಆ ದಿನ ಆರೋಪಿ ಧರಿಸಿದ್ದ ಬಟ್ಟೆಗಳಿವೆ ಎಂದರೆ ನನಗೆ ಗುರುತಿಸಲು ಆಗುವುದಿಲ್ಲ. ಈಗ ನಾನು ನೋಡುತ್ತಿರುವ ಎಂ.ಒ-*1* ಘಟನೆ ಕಾಲಕ್ಕೆ ನನ್ನ ಮಗ ಧರಿಸಿದ್ದ ಟಿ.ಶರ್ಟ್ ಇದೆ ಎಂದರೆ ನಿಜ.

<u>ಪಾಟೀ ಸವಾಲು : ಆರೋಪಿ ಪರ ವಕೀಲರಾದ ಶ್ರೀ ಟಿ.ಹೆಚ್.ಕೆ ರವರಿಂದಃ-</u>

*3.* ಆ ದಿನ ಚಂದನ್ ಕರೆದ ಎಂದು ನನ್ನ ಮಗ ಹೊರಗೆ ಬಂದಾಗ ನಾನು ಹೊರಗಡೆ ಬಂದು ನೋಡಿರಲಿಲ್ಲ. ಆ ಕಾಲಕ್ಕೆ ಅವರಿಬ್ಬರ ನಡುವೆ ಜೋರಾಗಿ ಮಾತು ಕತೆ ನಡೆದ ಬಗ್ಗೆ ನಾನು ಕೇಳಿಲ್ಲ. ಆ ದಿನ ಮನೆಯಿಂದ ಹೊರಗಡೆ ಬಂದಾಗ ಆರೋಪಿತ ಓಡಿ ಹೋಗುವುದನ್ನು ನೋಡಿದ್ದೆ. ಆ ದಿನ ನಾನು ಆರೋಪಿತನನ್ನು ನೋಡಿಲ್ಲ ಎಂದರೆ ಸರಿಯಲ್ಲ. ನನ್ನ ಮಗ ಧರಿಸಿದ್ದ ಟಿ.ಶರ್ಟ್ ಬಿಳಿ ಬಣ್ಣದ್ದು ಇದೆ. ಅದರಲ್ಲಿ ಕೆಂಪು ಮತ್ತು ನೀಲಿ ಬಣ್ಣದ ಚಿತ್ರಗಳು ಇವೆ. ಎಂ.ಒ-*1* ರಂತ ಶರ್ಟ್ ಗಳು ಎಲ್ಲಾ ಅಂಗಡಿಗಳಲ್ಲೂ ಸಿಗುತ್ತವೆ ಎಂದರೆ ನಿಜ. ಶರ್ಟ್ ಗೆ ಎಷ್ಟು ಕಡೆ ತೂತುಗಳು ಆಗಿವೆ ಎಂದು ಗೊತ್ತಿಲ್ಲ. ಎಂ.ಒ-*1* ಅನ್ನು ಈ ಕೇಸಿಗೊಸ್ಕರ ನಾನು ಮತ್ತು ನನ್ನ ಮಗ

ಸೃಷ್ಟಿಸಿ ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ಆ ಘಟನೆಗಿಂತ ಮೊದಲು ನನ್ನ ಮಗ ವಿನಯ್ ನ ಪ್ರಕರಣದ ಬಗ್ಗೆ ನನಗೆ ಹೇಳಿರಲಿಲ್ಲ ಮತ್ತು ಆ ಪ್ರಕರಣದ ತನಿಖೆ ಕಾಲಕ್ಕೆ ಪೊಲೀಸರು ನಮ್ಮ ಮನೆ ಬಳಿ ಬಂದಿಲ್ಲ. ಆ ದಿನ *8.45* ರಿಂದ *9* ಗಂಟೆ ವರೆಗೆ ನಾವು ಆರೋಪಿತನ ಹಿಂದೆ ಓಡಿ ಹೋಗಿದ್ದೆವು. ನಂತರ *9.15* ಕ್ಕೆ ಆರೋಪಿತನ ಮನೆ ಬಳಿ ಹೋಗಿದ್ದೆವು. ಘಟನೆ ಕಾಲಕ್ಕೆ ನನ್ನ ಇನ್ನೊಬ್ಬ ಮಗ ಚೇತನ್ ಎಲ್ಲಿದ್ದ ಮತ್ತು ಎಷ್ಟು ಗಂಟೆಗೆ ಅಲ್ಲಿಗೆ ಬಂದಿದ್ದ ಎಂದು ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ನಿಜ. ನಂತರ *9.45* ರಿಂದ *10* ಗಂಟೆಗೆ ನಾನು, ಚಾ.ಸಾ–*1* ಮತ್ತು ಚಾ.ಸಾ–*10* ವಾಪಸ್ಸು ಮನೆಗೆ ಬಂದಿದ್ದೆವು. ನಂತರ *5* ನಿಮಿಷದ ಬಳಿಕ ನನ್ನ ಮಗನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ಆ ಕಾಲಕ್ಕೆ ಯಾವ ವಾಹನದಲ್ಲಿ ಹೋದರು ಎಂದು ಹೇಳಿಕೆಯಲ್ಲಿ ನಮೂದು ಇಲ್ಲ ಎಂದರೆ ನಿಜ. ನನ್ನ ಮಕ್ಕಳ ಜೊತೆ ಬೇರೆ ಎಷ್ಟು ಜನ ಆಸ್ಪತ್ರೆಗೆ ಹೋಗಿದ್ದರು ಎಂದು ನನಗೆ ಗೊತ್ತಿಲ್ಲ. ಆಸ್ಪತ್ರೆಯಿಂದ ಯಾವ ಸಮಯಕ್ಕೆ ವಾಪಸ್ಸು ಬಂದಿದ್ದರು ಎಂದು ನನ್ನ ಹೇಳಿಕೆಯಲ್ಲಿ ನಮೂದು ಇಲ್ಲ ಎಂದರೆ ನಿಜ. ಘಟನೆ ನಡೆದು *2* ದಿನಕ್ಕೆ ಪೋಲೀಸ್ ಠಾಣೆಗೆ ಹೋಗಿದ್ದರು. ಘಟನೆ ದಿನವೂ ಸಹ ನಾನು ಪೋಲೀಸ್ ಠಾಣೆಗೆ ಹೋಗಿದ್ದೆ ಆದರೆ ಅಲ್ಲಿ ಯಾರು ಇರಲಿಲ್ಲ ನಾನೇ ನನ್ನ ಮಗ ಬರಲಿ ಎಂದು ವಾಪಸ್ಸು ಬಂದಿದ್ದೆ. ಪೋಲೀಸ್ ಠಾಣೆಗೆ ಹೋದ ಬಗ್ಗೆ ಹೇಳಿಕೆಯಲ್ಲಿ ನಮೂದು ಇಲ್ಲ. ಪೊಲೀಸರ ತನಿಖೆ ವೇಳೆಯಲ್ಲಿ ನನ್ನ ಸಹಿ ಪಡೆದಿಲ್ಲ ಮತ್ತು ನನ್ನ ಸಮಕ್ಷಮ ಮಹಜರ್ ಮಾಡಿಲ್ಲ.

**ಮರು ವಿಚಾರಣೆ:- ಇಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
**ಮೈಸೂರು**